ಕರ್ನಾಟಕ ಸರ್ಕಾರ

(ತೋಟಗಾರಿಕೆ ಇಲಾಖೆ)

DH-PLNOPLNT/5/2022-PLAN-/AHO-2/715867 ತೋಟಗಾರಿಕೆ ಜಂಟಿ ನಿರ್ದೇಶಕರ ಕಛೇರಿ

ಯೋಜನೆ, ಲಾಲ್‌ಬಾಗ್, ಬೆಂಗಳೂರು

ದಿನಾಂಕ:07.05.2022

## ಸುತ್ತೋಲೆ

**ವಿಷಯ:** 2022-23ನೇ ಸಾಲಿನ ತೋಟಗಾರಿಕೆ ಕಟ್ಟಡಗಳು (ಜಿಲ್ಲಾವಲಯ) ಯೋಜನೆಯ ಮಾರ್ಗಸೂಚಿಗಳನ್ನು ಕಳುಹಿಸುತ್ತಿರುವ ಬಗ್ಗೆ

**ಉಲ್ಲೇಖ:** 2022-23ನೇ ಸಾಲಿನ ಆಯವ್ಯಯದ ಜಿಲ್ಲಾ ವಲಯ ಸಂಪುಟ1-4 (ಜಿಲ್ಲಾ ಪಂಚಾಯತ್ ಲಿಂಕ್ ಡ್ಯಾಕುಮೆಂಟ್ ನಂತೆ)

*******

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, 2022-23ನೇ ಸಾಲಿನ ತೋಟಗಾರಿಕೆ ಕಟ್ಟಡಗಳು (ಜಿಲ್ಲಾವಲಯ) ಯೋಜನೆಯ ಮಾರ್ಗಸೂಚಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಿ ಕಳುಹಿಸುತ್ತಾ, ಉಲ್ಲೇಖದ ಜಿಲ್ಲಾ ಪಂಚಾಯತ್ ಲಿಂಕ್ ಡ್ಯಾಕುಮೆಂಟ್ ನಂತೆ ತಮ್ಮ ಜಿಲ್ಲೆಗೆ ನಿಗಧಿಯಾಗಿರುವ ಅನುದಾನಕ್ಕೆ ಮಾರ್ಗಸೂಚಿಯಂತೆ ಕ್ರಮವಹಿಸಲು ಸೂಚಿಸಿದೆ.

ಮುಂದುವರೆದು, ಪ್ರತಿ ಮಾಹೆಯ 03ನೇ ತಾರೀಖಿನೊಳಗೆ ತೋಟಗಾರಿಕೆ ಕಟ್ಟಡಗಳು (ಜಿಲ್ಲಾವಲಯ) ಯೋಜನೆಯ ಪ್ರಗತಿ ವರದಿಯನ್ನು ಯೋಜನಾ ವಿಭಾಗಕ್ಕೆ ತಪ್ಪದೇ ಕಳುಹಿಸಲು ಹಾಗೂ ಭೌತಿಕ ಪ್ರಗತಿಯನ್ನು ಅವಲೋಕನ ತಂತ್ರಾಂಶದಲ್ಲಿ ಅಳವಡಿಸಲು ಸೂಚಿಸಿದೆ.

ತೋಟಗಾರಿಕೆ ಜಂಟಿ ನಿರ್ದೇಶಕರು

(ಯೋಜನೆ)

ರವರಿಗೆ,

ತೋಟಗಾರಿಕೆ ಉಪನಿರ್ದೇಶಕರು (ಜಿಪಂ) ಎಲ್ಲಾ ಜಿಲ್ಲೆಗಳು

## 2022-23ನೇ ಸಾಲಿನ ತೋಟಗಾರಿಕೆ ಕಟ್ಟಡಗಳು (ಜಿಲ್ಲಾವಲಯ) ಯೋಜನೆಯ ಅನುಷ್ಠಾನದ ಮಾರ್ಗಸೂಚಿ:

**ಯೋಜನೆಯ ಹೆಸರು**: ತೋಟಗಾರಿಕೆ ಕಟ್ಟಡಗಳು (ಜಿಲ್ಲಾವಲಯ)

(ಲೆಕ್ಕಶೀರ್ಷಿಕೆ :2435-00-101-0-32) ಉಪ ಶೀರ್ಷಿಕೆ – 140

**1. ಯೋಜನೆಯ ಉದ್ದೇಶಗಳು**

ಈ ಯೋಜನೆಯಡಿ ಇಲಾಖೆಯ ಅಧೀನ ಜಿಲ್ಲೆ / ತಾಲ್ಲೂಕುಗಳ ಕಛೇರಿಗಳಲ್ಲಿ ಹಾಗೂ ತೋಟಗಾರಿಕೆ ಕ್ಷೇತ್ರಗಳಲ್ಲಿ ದಿನನಿತ್ಯದ ಕೆಲಸಗಳನ್ನು ನಿರ್ವಹಿಸಲು ಕಟ್ಟಡಗಳ ನಿರ್ಮಾಣ ಹಾಗೂ ದುರಸ್ಥಿ ಸೌಲಭ್ಯಗಳನ್ನು ಕಲ್ಪಿಸುವುದು.

**2. ಯೋಜನೆಯ ಸಂಕ್ಷಿಪ್ತ ಪರಿಚಯ ಮತ್ತು ಮುಖ್ಯಾಂಶಗಳು**

- ಈ ಯೋಜನೆಯು ಮುಂದುವರೆದ ಯೋಜನೆಯಾಗಿದೆ.
- ತೋಟಗಾರಿಕೆ ಕ್ಷೇತ್ರಗಳಲ್ಲಿ, ತಾಲ್ಲೂಕು ಹಾಗೂ ಜಿಲ್ಲೆಗಳ ಕಛೇರಿಗಳಲ್ಲಿ ದಿನನಿತ್ಯದ ಕೆಲಸಗಳನ್ನು ನಿರ್ವಹಿಸಲು ಕಟ್ಟಡಗಳ ನಿರ್ಮಾಣ, ದುರಸ್ಥಿ ಹಾಗೂ ಆಧುನೀಕರಣ/ ನವೀಕರಣದ ಸೌಲಭ್ಯಗಳನ್ನು ಕಲ್ಪಿಸಲಾಗುತ್ತಿದೆ. ಈ ಯೋಜನೆಯಡಿ ಕಛೇರಿಗಳಲ್ಲಿ ಅಗತ್ಯವಾಗಿ ಬೇಕಾದ ಕಛೇರಿ ಉಪಕರಣಗಳು, ಎಲೆಕ್ಟ್ರಾನಿಕ್ ಯಂತ್ರೋಪಕರಣಗಳಾದ ಜೆರಾಕ್ಸ್, ಮುಂತಾದ ಉಪಕರಣಗಳನ್ನು ಅಳವಡಿಸಲು ಅವಕಾಶವಿರುತ್ತದೆ.
- 2022-23ನೇ ಸಾಲಿನ ಸದರಿ ಯೋಜನೆಯ ಮೇಲುಸ್ತುವಾರಿಯನ್ನು ತೋಟಗಾರಿಕೆ ಜಂಟಿ ನಿರ್ದೇಶಕರು (ಯೋಜನೆ) ರವರು ನಿರ್ವಹಿಸುತ್ತಾರೆ.

**3. ಅನುದಾನ:**

- 2022-23ನೇ ಸಾಲಿಗೆ ಸದರಿ ಯೋಜನೆಗೆ ಲಿಂಕ್ ಡಾಕ್ಯೂಮೆಂಟ್ ಪ್ರಕಾರ ರೂ. 913.62 ಲಕ್ಷಗಳ ಅನುದಾನ ನಿಗದಿಪಡಿಸಲಾಗಿದೆ.

**4. ಎಂ.ಪಿಕ್ ಹಾಗೂ ಅನುಷ್ಠಾನ ಪ್ರಕ್ರಿಯೆ.**

- ಕಟ್ಟಡದ ಕಾಮಗಾರಿಗಳನ್ನು ತೆಗೆದುಕೊಳ್ಳುವಾಗ ಇಲಾಖೆಗೆ ಸೇರಿದಂತ (RTC ಇಲಾಖೆಯ ಹೆಸರಿನಲ್ಲಿ ಇರಬೇಕು) ಸ್ಥಳ/ಪ್ರದೇಶದಲ್ಲಿ ಕೈಗೊಳ್ಳಬೇಕು. ಕ್ಷೇತ್ರ ಮತ್ತು ನರ್ಸರಿಗಳಲ್ಲಿ ಸಸ್ಯಾಭಿವೃದ್ದಿಗೆ ತೊಂದರೆಯಾಗದ ಸ್ಥಳದಲ್ಲಿ ಕಾಮಗಾರಿಗಳನ್ನು ತೆಗೆದುಕೊಳ್ಳುವುದು ಮತ್ತು

ಕ್ಷೇತ್ರದಲ್ಲಿ ಕಾಮಗಾರಿ ಇದ್ದರೆ, ಕೇಂದ್ರ ಕಛೇರಿಯ ಕ್ಷೇತ್ರ ಮತ್ತು ನರ್ಸರಿ ವಿಭಾಗದಿಂದ ಅನುಮತಿ ಪಡೆಯುವುದು.

- ಏಜೆನ್ಸಿ / ಜಿಲ್ಲೆಯ ತಾಂತ್ರಿಕ ಇಲಾಖೆ / ಇತರೆ ಸಂಸ್ಥೆ ರವರಿಂದ ಚಾಲ್ತಿಯಲ್ಲಿರುವ ಲೋಕೋಪಯೋಗಿ ಇಲಾಖೆಯ ದರಪಟ್ಟಿಯ ದರಗಳನ್ವಯ ಅಂದಾಜು ಪಟ್ಟಿಯನ್ನು ಸಿದ್ಧಪಡಿಸುವುದು.
- ಜಿಲ್ಲೆಗಳಲ್ಲಿ ಹಾಗೂ ತಾಲ್ಲೂಕುಗಳಲ್ಲಿ ಜಿಲ್ಲೆಯ ತೋಟಗಾರಿಕೆ ಉಪನಿರ್ದೇಶಕರು ಅಗತ್ಯತೆಯನ್ವಯ ಕಾಮಗಾರಿಗೆ ನಿಗದಿಪಡಿಸಿದ ಅನುದಾನಕ್ಕೆ ಪಟ್ಟಿ ಮಾಡಿ ಅನುಮೋದನೆಯನ್ನು ಸ್ಥಾಯಿ ಸಮಿತಿಯಿಂದ ಪಡೆಯುವುದು.
- ಸಮಿತಿಯಿಂದ ಅನುಮೋದನೆ ಪಡೆದು ಕಾಮಗಾರಿಗೆ ಎಂಪಿಕ್ ತಯಾರಿಸಿ ಕೇಂದ್ರ ಸ್ಥಾನದಲ್ಲಿ ಯೋಜನೆಯ ಉಸ್ತುವಾರಿ ಅಧಿಕಾರಿಗಳಿಗೆ ಪರಿಶೀಲನೆಗಾಗಿ ಕಳುಹಿಸಿ, ನಿರ್ದೇಶಕರ ಅನುಮೋದನೆ ಪಡೆದುಕೊಳ್ಳುವುದು.
- ಆಯಾ ಕಾಮಗಾರಿಗೆ ಅನುದಾನವನ್ನು ಇಲಾಖೆ/ಸಂಸ್ಥೆಗಳಿಗೆ ಜಮೆಮಾಡಬೇಕೆ ಅಥವಾ ಟೆಂಡರ್ ಮಾಡುವುದರ ಬಗ್ಗೆ ಅನುಷ್ಠಾನಾಧಿಕಾರಿರವರು ತೀರ್ಮಾನಿಸುವುದು.
- ನಿಯಮಾವಳಿಯ ಪ್ರಕಾರ ಕಾಮಗಾರಿಗಳಿಗೆ ಆಡಳಿತಾತ್ಮಕ ಮಂಜೂರಾತಿ ಮುಂತಾದನ್ನು ಅನುಮೋದನೆ ಪಡೆದುಕೊಂಡು ಠೇವಣಿ/ಟೆಂಡರ್ ಪ್ರಕ್ರಿಯೆಯನ್ನು ಕೈಗೊಳ್ಳುವುದು.
- ಅನುದಾನ ಲಭ್ಯತೆ/ಬಿಡುಗಡೆಯನ್ನು ಖಾತರಿಪಡಿಸಿಕೊಂಡು, ಕಾರ್ಯಾದೇಶ ನೀಡಿದ ನಂತರ ಅನುದಾನ ಜಮೆ ಮಾಡುವುದು ಅಥವಾ L1 ಬಿಡ್ಡುದಾರರಿಗೆ ಹಂತಹಂತವಾಗಿ ಬಿಲ್ ಪಾವತಿ ಮಾಡುವುದು.
- ಯೋಜನೆಯ ಅನುಷ್ಠಾನದಲ್ಲಿ ಬದಲಾವಣೆಗಳು ಇದ್ದಲ್ಲಿ ಉಸ್ತುವಾರಿ ವಿಭಾಗದಿಂದ ಕಡ್ಡಾಯವಾಗಿ ಅನುಮತಿ ಪಡೆಯುವುದು.
- ಅನುದಾನವನ್ನು ಸಂಬಂಧಿಸಿದ ಸಂಸ್ಥೆಗಳಿಗೆ GIA (GRANT IN AID) ಬಿಲ್ಲುಗಳ ಮುಖಾಂತರ ಜಮೆ ಮಾಡಿ ಕಾಮಗಾರಿಯನ್ನು ಕಡಿಮೆ ಸಮಯಕ್ಕೆ ಸೀಮಿತಗೊಳಿಸಿ ಅನುಷ್ಠಾನಗೊಳಿಸುವುದು.
- ಕೈಗೊಳ್ಳುವ ಕಾಮಗಾರಿಗಳಿಗೆ ಕಾರ್ಯಾದೇಶ ನೀಡುವುದರ ಜೊತೆಗೆ ಕಾಮಗಾರಿಯ ಗುಣಮಟ್ಟದ ಬಗ್ಗೆ ಆಯಾ ಕಛೇರಿಯ ಅಧಿಕಾರಿಗಳು ಆಗಿಂದಾಗ ಪರಿಶೀಲಿಸಿ ಕಾಮಗಾರಿಯ ಗುಣಮಟ್ಟವನ್ನು ಖಾತರಿ ಪಡಿಸಿಕೊಳ್ಳತಕ್ಕದ್ದು.
- ಕಾಮಗಾರಿ ಪೂರ್ಣಗೊಂಡ ನಂತರ ಸಂಬಂಧಿಸಿದ ಇಂಜಿನೀಯರಿಂಗ್ ವಿಭಾಗದಿಂದ ಕಟ್ಟಡದ ಅಂದಾಜು ಪಟ್ಟಿಯ ಅನುಗುಣವಾಗಿ ಕಟ್ಟಡ ಪರಿಶೀಲಿಸಿದ ನಂತರ ಹಸ್ತಾಂತರ ಪಡೆಯುವುದು.

**5. ಪ್ರಗತಿ ವರದಿ:**

ಪ್ರಗತಿ ವರದಿಯನ್ನು ಎಂಪಿಕ್ ಪ್ರಕಾರ, ನಿಗಧಿತ ನಮೂನೆಯಲ್ಲಿ ಪ್ರತಿ ಮಾಹೆಯ 03ನೇ ತಾರೀಖಿನೊಳಗಾಗಿ ಇ-ಮೇಲ್ ಮೂಲಕ ಕಳುಹಿಸುವುದು ಹಾಗೂ ಆರ್ಥಿಕ ಮತ್ತು ಭೌತಿಕ ಪ್ರಗತಿಯನ್ನು ನೂತನ DSS ತಂತ್ರಾಂಶದಲ್ಲಿ ಇಂಧೀಕರಿಸುವುದು. ಸದರಿ ಪ್ರಗತಿ ವರದಿಯ ದೃಢೀಕೃತ ಪ್ರತಿಯನ್ನು ಯೋಜನಾ ಮೇಲುಸ್ತುವಾರಿ ಅಧಿಕಾರಿರವರಿಗೆ ಸಲ್ಲಿಸುವುದು. ತದನಂತರ ಹಣ ಬಳಕೆ ಪ್ರಮಾಣ ಪತ್ರವನ್ನು ಹಾಗೂ ಕಾಮಗಾರಿ ಪೂರ್ಣಗೊಂಡ ವರದಿಯ ಪ್ರತಿಯನ್ನು ಆಯಾ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಹಾಗೂ ಪ್ರತಿಯನ್ನು ತೋಟಗಾರಿಕೆ ಜಂಟಿ ನಿರ್ದೇಶಕರು, ಯೋಜನಾ ವಿಭಾಗಕ್ಕೆ ಸಲ್ಲಿಸುವುದು.

**6. ಫಲಶೃತಿ:**

ತೋಟಗಾರಿಕೆ ಇಲಾಖೆಯ ಕಛೇರಿ ಕಟ್ಟಡಗಳ ನಿರ್ಮಾಣ ಹಾಗೂ ಆಧುನೀಕರಣಗೊಳಿಸುವ ಮೂಲಕ ವ್ಯವಸ್ಥಿತ ಸೌಲಭ್ಯಗಳನ್ನು ಒದಗಿಸುವುದು.

ನಿರ್ದೇಶಕರು.